## ಭಟ್ಟರ್ ಸ್ಕಾಚ್

● **ಶಿವಲಿಂಗ ಸಿಂಗಶೆಟ್ಟಿ, ಕಲಬುರಗಿ**
ಭಟ್ರೇ, ಭಾರತ ಜನಸಂಖ್ಯೆಯಲ್ಲಿ ವಿಶ್ವದಲ್ಲೇ ನಂಬರ್ ಒನ್ ದೇಶವಾಯ್ತಲ್ಲ?
**- ಡಾ.ಪರಮೇಶ್ವರ ಅವರನ್ನು ಕೇಳಿದರೆ ಮಕ್ಕಳಾಟ ಎಂದು ಹೇಳುತ್ತಿದ್ದರೇನೋ?!**

● **ಭಾಸ್ಕರ ಹೆಗಡೆ, ಸಿದ್ದಾಪುರ**
ಭಟ್ರೇ, ಡಿಕೆಶಿ ದೇಶದಲ್ಲೇ ಅತ್ಯಂತ ಶ್ರೀಮಂತ ರಾಜಕಾರಣಿಯಂತೆ?
**- ಕಲ್ಲಂಗಡಿ, ಆಲೂಗಡ್ಡೆ ಬೆಳೆದು ಅಷ್ಟು ಶ್ರೀಮಂತರಾಗಬಹುದು ಎಂದು ತೋರಿಸಿಕೊಟ್ಟದ್ದಕ್ಕೆ ಅಭಿಮಾನಪಡಬಾರದೇ?!**

● **ನಿತ್ಯಾನಂದ ಪರಪ್ಪನವರ, ಹೊಸಕೋಟೆ**
ಸರ್, ದೇವರಿಗೆ ಎಲ್ಲಾ ಭಾಷೆಗಳೂ ಬರುತ್ತವಾ?
**- ಇಲ್ಲದಿದ್ದರೆ ಆತ ಗೂಗಲ್ ಟ್ರಾನ್ಸಲೇಟರ್ ಯಾಕೆ ಕಂಡುಹಿಡಿಯುತ್ತಿದ್ದ?!**

● **ಬನ್ನಾಡಿ ಗೋಪಿ, (ಇಮೇಲ್ ಮೂಲಕ)**
ಸರ್, ಪುರುಷರಿಗೆ ಯಾವಾಗ ಉಚಿತ ಪ್ರಯಾಣ?
**- ಪೊಲೀಸರು ಜೀಪಿನಲ್ಲಿ ಉಚಿತವಾಗಿ ಕರೆದೊಯ್ಯುವುದನ್ನು ನೋಡಿಯೂ ಈ ಪ್ರಶ್ನೆಯಾ?!**

● **ನೀರಜ್ ಶೆಟ್ಟಿ, ಬೆಂಗಳೂರು**
ಭಟ್ರೇ, ಹುಡುಗಿಯರಿಗೆ ಪಾನಿಪುರಿ ಅಂದ್ರೆ ಏಕೆ ಇಷ್ಟ ?
**- ತಲೆ ಮೇಲೆ ಮೊಟಕಿ, ಪೂರ್ತಿ ಮುಳುಗಿಸುವುದೆಂದ್ರೆ ಅವರಿಗೆ ಇಷ್ಟ!**

● **ಕಾವೇರಿ ಬಸವಯ್ಯ, ದಾವಣಗೆರೆ**
ಭಟ್ರೇ, ನಿಮ್ಮ ಪುಸ್ತಕಗಳನ್ನು ಹಿಡಿದು ಹೋಗುವುದು ಪ್ರೆಸ್ಟೀಜ್ ಅಂತಾರಲ್ಲ?
**- ಅದು ನನ್ನ ಕೈ ಹಿಡಿದು ಹೋಗಲು ಸಾಧ್ಯವಾಗದವರ ಸಾಂತ್ವನ!**

● **ನಂದಿನಿ (ಇಮೇಲ್ ಮೂಲಕ)**
ಭಟ್ರೇ, ಭೈರಪ್ಪನವರೂ ಭಟ್ಟರ್ ಸ್ಕಾಚ್ ಅಭಿಮಾನಿಯಂತೆ, ಹೌದಾ ?
**- ಮೋದಿಯವರಿಗೆ ಕನ್ನಡ ಓದಲು ಬರುತ್ತಿದ್ದರೆ, ಕಥೆಯೇ ಬೇರೆ ಇತ್ತು!**


● **ಅನಂತ ಉರಾಳ, ಸಾಗರ**
ಸರ್, ಕೈದಿಗಳು ಬಿಡುಗಡೆಯಾದಾಗ ಸೇಬುಹಾರ ಹಾಕಿ ಸ್ವಾಗತಿಸುತ್ತಾರಲ್ಲ?
**- ಜೈಲಿಗೆ ಹಾಕುವಾಗ ಒಳಗಿದ್ದವರು ಕನಿಷ್ಠ ಹಾರ ಹಾಕಿ ಸ್ವಾಗತಿಸುವುದಿಲ್ಲವಲ್ಲ ಅಂತ ನಿನ್ ತಕರಾರಾ?!**

● **ಲಿಂಗಯ್ಯ ಹಿರೇಮಠ, ಬಾಗಲಕೋಟೆ**
ಸರ್, ಬೆಳಗ್ಗೆ ಎದ್ದು ಸ್ವಾಮೀಜಿ ಮಾತು ಕೇಳಿದರೂ ಮೂಡು ಕೆಡುತ್ತದಲ್ಲ?
**- ನೀನು ಹೋಗಿ ಹೋಗಿ ಆ ನಿಜಗುಣಾನಂದ ಸ್ವಾಮೀಜಿ ಪ್ರವಚನ ಕೇಳಿರಬೇಕು!**

● **ಎಸ್.ಜಿ.ಹೆಗಡೆ, ಶಿರಸಿ**
ಭಟ್ರೇ, ಪೊಲೀಸರು ಮನೆಯಲ್ಲೂ ಸರಿಯಾಗಿ ಡ್ಯೂಟಿ ಮಾಡ್ತಾರಾ ?
**- ಆಗ ಮನೆಯಲ್ಲಿರುವ ಜೇಬುಗಳ್ಳರನ್ನು ಒದ್ದು ಒಳಗೆ ಹಾಕಬೇಕಾಗುತ್ತದೆ!**

# ಮೂಲೆಗುಂಪಾಗುತ್ತಿದೆ ಕೆಂಪು ಉಗ್ರವಾದ

**ದೇಶದಲ್ಲೀಗ ಹೆಚ್ಚು ನಕ್ಸಲರು ಇರುವುದು ಛತ್ತೀಸ್‌ಗಢದಲ್ಲಿ. ಇತ್ತೀಚೆಗೆ ಅಲ್ಲಿ ನಡೆಸಲಾದ ಕಾರ್ಯಾಚರಣೆಯಲ್ಲಿ 29 ಮಂದಿ ನಕ್ಸಲರನ್ನು ಕೊಂದುಹಾಕಲಾಯಿತು. ಇದು ಈಚಿನ ವರ್ಷಗಳಲ್ಲಿನ ಇಂಥ ಕಾರ್ಯಾಚರಣೆಯಲ್ಲಿ ಅತಿಹೆಚ್ಚು ನಕ್ಸಲರು ಹತರಾದ ನಿದರ್ಶನವಾಗಿದೆ.**



**ಚರ್ಚಾವೇದಿಕೆ**
**ಗಣೇಶ್ ಭಟ್ ವಾರಾಣಸಿ**
vveditoped@gmail.com

ದೇಶದ ಆಂತರಿಕ ಭದ್ರತೆಯಲ್ಲಿ ಗಮನಾರ್ಹ ಸುಧಾರಣೆಯಾಗಿರುವುದು ಕಳೆದ 10 ವರ್ಷಗಳಲ್ಲಿ ಭಾರತವು ಕಂಡ ಅತಿ ಪ್ರಮುಖ ಬದಲಾವಣೆಗಳಲ್ಲೊಂದು. ದಶಕದ ಹಿಂದೆ, ಜಮ್ಮು-ಕಾಶ್ಮೀರ ಸೇರಿದಂತೆ ದೇಶದೆಲ್ಲೆಡೆ ಉಗ್ರರ ದಾಳಿ, ಬಾಂಬ್ ಸ್ಫೋಟ, ನಕ್ಸಲ್ ಆಕ್ರಮಣಗಳು ಮತ್ತು ಈಶಾನ್ಯ ರಾಜ್ಯಗಳಲ್ಲಿ 'ಉಲ್ಫಾ' ದಾಳಿಯಂಥ ಘಟನೆಗಳು ಸರ್ವೇಸಾಮಾನ್ಯವಾಗಿದ್ದವು. ಆದರೀಗ ಪಾಕಿಸ್ತಾನಿ ಉಗ್ರರಿಗೆ ಕಾಶ್ಮೀರದ ಗಡಿ ದಾಟಿ ದೇಶದೊಳಗೆ ಬರಲು ಸಾಧ್ಯವಾಗುತ್ತಿಲ್ಲ. ದೇಶದ ಗುಪ್ತಚರ ವಿಭಾಗವು ಆಧುನೀಕರಣಗೊಂಡು ಹಿಂದೆಂದಿಗಿಂತಲೂ ಹೆಚ್ಚು ಸಕ್ಷಮವಾಗಿದೆ. ಗುಪ್ತಚರ ಇಲಾಖೆ, ಭಯೋತ್ಪಾದನಾ ನಿಗ್ರಹದಳ, ರಾಷ್ಟ್ರೀಯ ತನಿಖಾದಳ ಹಾಗೂ ರಾಜ್ಯ ಪೊಲೀಸರುಗಳ ನಡುವಿನ ಸಮನ್ವಯ ಉತ್ತಮಗೊಂಡಿದೆ. ಎಲ್ಲಕ್ಕಿಂತ ಮಿಗಿಲಾಗಿ, ಭಯೋತ್ಪಾದನೆಯಿಂದ ದೇಶವನ್ನು ಬಿಡುಗಡೆಗೊಳಿಸಬೇಕೆಂಬ ಇಚ್ಛಾಶಕ್ತಿಯುಳ್ಳ ನಿರ್ಣಾಯಕ ಸರಕಾರವು ಕೇಂದ್ರದಲ್ಲಿದೆ. ಸರ್ಜಿಕಲ್ ಸ್ಟ್ರೈಕ್, ಬಾಲಾಕೋಟ್ ವೈಮಾನಿಕ ದಾಳಿ ಮುಂತಾದ ಪ್ರತ್ಯಾಕ್ರಮಣಗಳು ಉಗ್ರರನ್ನು ಹಿಮ್ಮೆಟ್ಟಿಸಿದವು. ಭಾರತಕ್ಕೆ ಬೇಕಾಗಿದ್ದ, ಪಾಕಿಸ್ತಾನದಲ್ಲಿ ಅಡಗಿ ಕುಳಿತಿದ್ದ 20ಕ್ಕೂ ಹೆಚ್ಚು ಮಂದಿ ಭಯೋತ್ಪಾದಕರು ಕಳೆದೆರಡು ವರ್ಷಗಳಲ್ಲಿ ಅಲ್ಲಿಯೇ ಅಪರಿಚಿತರ ಗುಂಡಿಗೆ ಬಲಿಯಾಗಿದ್ದಾರೆ. ಇವುಗಳೆಲ್ಲದರ ಪರಿಣಾಮವಾಗಿ ಭಾರತೀಯರಿಂದು ಹಿಂದೆಂದಿಗಿಂತ ಸುರಕ್ಷಿತರಾಗಿದ್ದಾರೆ. ದಶಕಗಳ ಹಿಂದೆ ಇಡೀ ದೇಶವನ್ನೇ ಆವರಿಸಿದ್ದ ನಕ್ಸಲರು ಇಂದು ತಮ್ಮ ಬಲವನ್ನು ಕಳೆದುಕೊಂಡು ದೇಶದ ಕೆಲವೇ ಜಿಲ್ಲೆಗಳಿಗೆ ಸೀಮಿತಗೊಂಡಿದ್ದಾರೆ. ಮುಂದಿನ 3 ವರ್ಷಗಳಲ್ಲಿ ಭಾರತವು ಕೆಂಪು ಉಗ್ರವಾದಿಗಳಿಂದ ಮುಕ್ತವಾಗಲಿದೆ.

ದೇಶದಲ್ಲೀಗ ಹೆಚ್ಚು ನಕ್ಸಲರು ಇರುವುದು ಛತ್ತೀಸ್‌ಗಢದಲ್ಲಿ ಮಾತ್ರ. ಕಳೆದ ಏಪ್ರಿಲ್‌ನ 16ರಂದು, ಅಲ್ಲಿನ ಕಾಂಕೇರ್‌ನಲ್ಲಿ ನಡೆಸಲಾದ ನಕ್ಸಲ್-ವಿರೋಧಿ ಕಾರ್ಯಾಚರಣೆಯಲ್ಲಿ 29 ಮಂದಿ ನಕ್ಸಲರನ್ನು ಕೊಂದುಹಾಕಲಾಯಿತು. ಇದು ಇತ್ತೀಚಿನ ವರ್ಷಗಳಲ್ಲಿನ ಇಂಥ ಕಾರ್ಯಾಚರಣೆಯಲ್ಲಿ ಅತಿಹೆಚ್ಚು ನಕ್ಸಲರು ಹತರಾದ ನಿದರ್ಶನವಾಗಿದೆ. ಕೆಲ ದಿವಸಗಳ ಹಿಂದೆ ದಾಂತೇವಾಡದಲ್ಲಿ 23 ನಕ್ಸಲರು ತಮ್ಮ ಶಸ್ತ್ರಾಸ್ತ್ರಗಳೊಂದಿಗೆ ಪೊಲೀಸರಿಗೆ ಶರಣಾದರು. ಏಪ್ರಿಲ್ 30ರಂದು ನಡೆದ ಕಾರ್ಯಾಚರಣೆಯಲ್ಲಿ 9 ಮಂದಿ ನಕ್ಸಲರು ಹತರಾದರು. ಈ ಎಲ್ಲ ಕಾರ್ಯಾಚರಣೆಗಳಲ್ಲಿ ಪೊಲೀಸರು ಮತ್ತು ಭದ್ರತಾ ಸಿಬ್ಬಂದಿಗೆ ಯಾವುದೇ ಪ್ರಾಣಹಾನಿಯಾಗದಿದ್ದುದು ವಿಶೇಷ. ಛತ್ತೀಸ್‌ಗಢದಲ್ಲಿ ಬಿಜೆಪಿಯು ಅಧಿಕಾರಕ್ಕೆ ಬಂದ ನಂತರ 85ಕ್ಕೂ ಹೆಚ್ಚು ನಕ್ಸಲರ ಅಂತ್ಯವಾಗಿದೆ. 2007ರಲ್ಲಿ ದೇಶದ 160 ಜಿಲ್ಲೆಗಳು ನಕ್ಸಲ್-ಬಾಧಿತವಾಗಿದ್ದವು. 2013ರಲ್ಲಿ ಇದು 120ಕ್ಕೆ ಇಳಿದು, ಈಗ ಆ ಸಂಖ್ಯೆ 56ಕ್ಕೆ ತಗ್ಗಿದೆ.

ಕಮ್ಯುನಿಸ್ಟ್ ಚಿಂತನೆಯನ್ನು ಹೊಂದಿ, ಹಿಂಸೆ ಮತ್ತು ರಕ್ತಪಾತದಲ್ಲಿ ಮಾತ್ರ ನಂಬಿಕೆಯಿಟ್ಟಿರುವ ಸಶಸ್ತ್ರ ಕ್ರಾಂತಿಯೇ ನಕ್ಸಲಿಸಂ. 1967ರಲ್ಲಿ ಪಶ್ಚಿಮ ಬಂಗಾಳದ ಡಾರ್ಜಿಲಿಂಗ್‌ನ ಸಿಲಿಗುರಿಯ ನಕ್ಸಲ್‌ಬಾರಿ ಎಂಬ ಊರಿನಲ್ಲಿ ಈ ಹಿಂಸಾಚಾರ ಆರಂಭವಾಯಿತು. ಅಲ್ಲಿ ಬುಡಕಟ್ಟು ಜನಾಂಗದವರೊಡನೆ 'ಆಲ್ ಇಂಡಿಯಾ ಕೋಆರ್ಡಿನೇಷನ್ ಕಮಿಟಿ ಆಫ್ ಕಮ್ಯುನಿಸ್ಟ್ ರೆವಲ್ಯೂಷನರೀಸ್', 'ಆಲ್ ಇಂಡಿಯಾ ಕಿಸಾನ್ ಸಭಾ' ಹಾಗೂ ಸ್ಥಳೀಯ ರೈತರು ಸೇರಿಕೊಂಡು ಭೂಮಾಲೀಕರೊಡನೆ ಸಂಘರ್ಷವನ್ನು ಆರಂಭಿಸಿದರು. ಚಾರು ಮಜುಂದಾರ್, ಕಾನು ಸಾನ್ಯಾಲ್, ಜಂಗಲ್ ಸಂತಾಲ್, ಶಾಂತಿ ಮುಂಡಾ ಮೊದಲಾದ ಕಮ್ಯುನಿಸ್ಟ್ ನಾಯಕರು ನಕ್ಸಲ್ ಹೋರಾಟದ ನೇತೃತ್ವವನ್ನು ವಹಿಸಿದ್ದರು. ಈ ಹೋರಾಟವು ನಂತರದ ದಿನಗಳಲ್ಲಿ ದೇಶಾದ್ಯಂತ ಸಶಸ್ತ್ರ ಹೋರಾಟ ನಡೆಸುವುದಕ್ಕೆ ಕಮ್ಯುನಿಸ್ಟರಿಗೆ ಚಿತಾವಣೆ ನೀಡಿತು. ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್ ಲೆನಿನಿಸ್ಟ್) ನೇತೃತ್ವದಲ್ಲಿ ನಕ್ಸಲರ ಹೋರಾಟ ನಡೆಯಿತು. ನಂತರದ ದಿನಗಳಲ್ಲಿ ಚೀನಾದ ಮಾವೋ ಝೆಡಾಂಗನ ಸಶಸ್ತ್ರ ಕ್ರಾಂತಿಯಿಂದ ಪ್ರೇರೇಪಿತರಾದ ನಕ್ಸಲರು ತಮ್ಮನ್ನು ಮಾವೋವಾದಿಗಳೆಂದು ಕರೆದುಕೊಂಡರು. ಇವರಿಗೆ ಭಾರತದಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ಆಯ್ಕೆಗೊಂಡ ಸರಕಾರಗಳ ಬಗ್ಗೆ ನಂಬಿಕೆಯಿಲ್ಲ. ನಕ್ಸಲರು ದೇಶದ ಕಾನೂನು ಹಾಗೂ ಸಂವಿಧಾನವನ್ನು ಒಪ್ಪಿಕೊಳ್ಳುವುದಿಲ್ಲ. ಇವರಿಗೆ ಪ್ರಜಾಪ್ರಭುತ್ವ ಪದ್ಧತಿಯ ಬಗ್ಗೆ ಒಲವಿಲ್ಲ. ಭಾರತದ ಚುನಾಯಿತ ಸರಕಾರವನ್ನು ಸಶಸ್ತ್ರ ಕ್ರಾಂತಿಯ ಮೂಲಕ ಕೆಳಗಿಳಿಸಿ, ಕಮ್ಯುನಿಸ್ಟ್ ಸರಕಾರವನ್ನು ಸ್ಥಾಪಿಸುವುದು ನಕ್ಸಲರ ಪರಮಗುರಿ ಆಗಿತ್ತು.



ಪಶ್ಚಿಮ ಬಂಗಾಳದಲ್ಲಿ ಜನ್ಮತಾಳಿದ ನಕ್ಸಲರು ಬಿಹಾರ, ಉತ್ತರಪ್ರದೇಶ, ಮಧ್ಯಪ್ರದೇಶ, ಒಡಿಶಾ, ಜಾರ್ಖಂಡ್, ಅವಿಭಜಿತ ಆಂಧ್ರಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ಮೊದಲಾದ ರಾಜ್ಯಗಳಿಗೂ ತಮ್ಮ ನೆಲೆಗಳನ್ನು ವಿಸ್ತರಿಸಿದರು. ಬಿಹಾರದಲ್ಲಿ ಭೂಮಾಲೀಕರ ವಿರುದ್ಧ ಹೋರಾಟ ಆರಂಭಿಸಿದ ನಕ್ಸಲರು, ಭೂಮಾಲೀಕರ ಅಪಹರಣ ಹಾಗೂ ಹತ್ಯೆಗಳನ್ನು ನಡೆಸಿದರು. ಕೊನೆಗೆ ಬಿಹಾರದ ಭೂಮಾಲೀಕರು ತಮ್ಮನ್ನು ತಾವೇ ರಕ್ಷಿಸಿಕೊಳ್ಳಲು 'ರಣವೀರ್ ಸೇನಾ' ಎಂಬ ಖಾಸಗಿ ಪಡೆಯನ್ನು ಕಟ್ಟಿಕೊಂಡರು. 1990ರಿಂದ 2000ನೇ ಇಸವಿಯವರೆಗಿನ ಅವಧಿಯಲ್ಲಿ ನಕ್ಸಲರು ಮತ್ತು ರಣವೀರ್ ಸೇನಾ ನಡುವೆ ಭಾರಿ ಸಂಘರ್ಷಗಳು ನಡೆದು ನೂರಾರು ಜನರು ಸಾವಿಗೀಡಾದರು. ಅದೇ ರೀತಿ, ಛತ್ತೀಸ್‌ಗಢದಲ್ಲಿ ನಕ್ಸಲರ ವಿರುದ್ಧ ಹೋರಾಡಲು ಅಲ್ಲಿನ ರಾಜ್ಯ ಸರಕಾರವು ಸ್ಥಳೀಯ ಬುಡಕಟ್ಟು ಜನಾಂಗದ ಯುವಕರನ್ನು ತರಬೇತುಗೊಳಿಸಿ, ಅವರ ಮೂಲಕ 2005ರಿಂದ 2011ರವರೆಗೆ ನಕ್ಸಲರ ವಿರುದ್ಧ 'ಸಲ್ವಾ ಜುಡುಂ' ಹೆಸರಿನ ಕಾರ್ಯಾಚರಣೆಯನ್ನು ನಡೆಸಿತು. ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಪ್ರೊ.ನಂದಿನಿ ಸುಂದರ್ ಅವರು ಈ ಕಾರ್ಯಾಚರಣೆ ವಿರುದ್ಧವಾಗಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದಾಗ, 'ಸಲ್ವಾ ಜುಡುಂ' ಕಾರ್ಯಾಚರಣೆಯು ಮಾನವ ಹಕ್ಕುಗಳಿಗೆ ವಿರುದ್ಧವಾಗಿದೆ ಎಂದು ಹೇಳಿ ಸುಪ್ರೀಂ ಕೋರ್ಟ್ ಅದನ್ನು ನಿಷೇಧಿಸಿತು. ಆದರೆ, ಇದೇ ಪ್ರೊ.ನಂದಿನಿ ಅವರು ಛತ್ತೀಸ್‌ಗಢದ ಕಾಡುಗಳಿಗೆ ತೆರಳಿ ನಕ್ಸಲರನ್ನು ಗುಟ್ಟಾಗಿ ಸಂಧಿಸುತ್ತಿದ್ದರು ಎಂದು ಪೊಡಿಯಾಮ್ ಪಾಂಡು ಅಲಿಯಾಸ್ ಪಾಂಡಾ ಎಂಬ ಹೆಸರಿನ ನಕ್ಸಲರ ನಾಯಕ ಹೇಳಿಕೆ ಕೊಟ್ಟಿದ್ದ. ಅದೇ ರೀತಿ, ನಕ್ಸಲರ ವಿರುದ್ಧ ಸೆಟೆದು ನಿಂತಿದ್ದ ಶಾಮ್‌ನಾಥ್ ಭಾಗೆಲ್ ಎಂಬ ಆದಿವಾಸಿ ಜನಾಂಗದ ನಾಯಕನನ್ನು ಕೊಲ್ಲಿಸುವಲ್ಲಿ ಪ್ರೊ.ನಂದಿನಿ ಅವರ ಪಾತ್ರವಿತ್ತು ಎಂದು ಕೇಸು ದಾಖಲಾಗಿತ್ತು. ಪ್ರೊ.ನಂದಿನಿ ಅವರು ಮೊದಲು 'ದಿ ಹಿಂದೂ' ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದ ಹಾಗೂ ಈಗಿನ 'ದಿ ವೈರ್' ಪತ್ರಿಕೆಯ ಸಂಸ್ಥಾಪಕರಾದ ಸಿದ್ಧಾರ್ಥ ವರದರಾಜನ್ ಅವರ ಪತ್ನಿ ಎಂಬುದು ಗಮನಾರ್ಹ ವಿಷಯ.

ನಕ್ಸಲರು 'ಪೀಪಲ್ಸ್ ವಾರ್ ಗ್ರೂಪ್' ಹೆಸರಿನಲ್ಲಿ ಅವಿಭಜಿತ ಆಂಧ್ರಪ್ರದೇಶದಲ್ಲಿ ವ್ಯಾಪಕವಾಗಿ ಕಾರ್ಯಾಚರಣೆ ನಡೆಸುತ್ತಿದ್ದರು. ಆಂಧ್ರದಲ್ಲಿ ನಕ್ಸಲರ ವಿರುದ್ಧ ಕಾರ್ಯಾಚರಣೆ ನಡೆಸಲು 'ಗ್ರೇ ಹೌಂಡ್' ಹೆಸರಿನ ಕಮಾಂಡೋ ತಂಡವನ್ನು 1986ರಲ್ಲಿ ರೂಪಿಸಲಾಯಿತು. 20-30 ಜನರನ್ನು ಹೊಂದಿದ್ದ ಈ ಕಮಾಂಡೋ ತಂಡಗಳು ನಕ್ಸಲರ ಮೇಲೆ ಗೆರಿಲ್ಲಾ ಮಾದರಿಯ ದಾಳಿಗಳನ್ನು ನಡೆಸಿ ಅವರನ್ನು ನಾಶಗೊಳಿಸಲು ಮುಂದಾದವು. 1995ರಿಂದ 2016ರವರೆಗಿನ ಅವಧಿಯಲ್ಲಿ ಗ್ರೇ ಹೌಂಡ್‌ಗಳು 1,780 ನಕ್ಸಲರನ್ನು ಕೊಂದರು. ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲಿ ಅಡಗಿದ್ದ ಶೇ.80ರಷ್ಟು ನಕ್ಸಲರನ್ನು ಸಂಪೂರ್ಣ ನಾಶಗೊಳಿಸಿದ ಕೀರ್ತಿ 'ಗ್ರೇ ಹೌಂಡ್'ಗಳಿಗೆ ಸಲ್ಲುತ್ತದೆ. ಇಂದು ಈ ಎರಡೂ ರಾಜ್ಯಗಳು ನಕ್ಸಲರಿಂದ ಬಹುತೇಕ ಮುಕ್ತವಾಗಿವೆ.

ನಕ್ಸಲರು ಪಾಕಿಸ್ತಾನಿ ಭಯೋತ್ಪಾದಕರಿಗಿಂತ ಕಡಿಮೆಯೇನಿಲ್ಲ. ನಕ್ಸಲರ ದಾಳಿಯಿಂದಾಗಿ ದೇಶದಲ್ಲಿ ಇದುವರೆಗೂ 12,000ಕ್ಕೂ ಹೆಚ್ಚು ಮಂದಿ ಹತ್ಯೆಗೀಡಾಗಿದ್ದು, ಇವರಲ್ಲಿ ಸುಮಾರು 4,000ದಷ್ಟು ಪೊಲೀಸರು ಹಾಗೂ ಭದ್ರತಾ ಸಿಬ್ಬಂದಿ ಸೇರಿದ್ದಾರೆ. ಕಳೆದ 22 ವರ್ಷಗಳಲ್ಲಿ ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯೊಂದರಲ್ಲೇ 1,775 ನಾಗರಿಕರನ್ನು ನಕ್ಸಲರು ಕೊಂದಿದ್ದಾರೆ. ವನವಾಸಿಗಳ ಅಭಿವೃದ್ಧಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ವಿಶ್ವ ಹಿಂದೂ ಪರಿಷತ್ತಿನ ಸ್ವಾಮಿ ಲಕ್ಷ್ಮಣಾನಂದ ಸರಸ್ವತಿಯವರನ್ನು, ಕ್ಯಾಥಲಿಕ್ ಪಾನೋಸ್‌ಗಳ ಜತೆಗೆ ಸೇರಿಕೊಂಡು ಹತ್ಯೆಗೈದವರು ನಕ್ಸಲೀಯರೇ. ನಕ್ಸಲರು ತಮ್ಮ ಪ್ರಾಬಲ್ಯದ ಪ್ರದೇಶಗಳಲ್ಲಿ ಸರಕಾರವು ನಿರ್ಮಿಸುವ ರಸ್ತೆ, ಸೇತುವೆ, ವಿದ್ಯುತ್ ಸಂಪರ್ಕ, ಮೊಬೈಲ್ ಟವರ್ ಮೊದಲಾದವನ್ನು ಹಾಳುಗೆಡವುತ್ತಾರೆ. ಇವರಿಗೆ ಅಭಿವೃದ್ಧಿ ಸಹ್ಯವಲ್ಲ. ನಕ್ಸಲರಿಗೆ ಚೀನಾದ ತಾತ್ವಿಕ ಬೆಂಬಲವಿದೆ. ಪಾಕಿಸ್ತಾನದ ಮತ್ತು ಈಶಾನ್ಯ ರಾಜ್ಯಗಳ ಉಗ್ರರ ಜತೆಗೂ ನಕ್ಸಲರಿಗೆ ಸಂಪರ್ಕವಿದೆ.

ನಕ್ಸಲರಿಗೆ ರಾಜಕೀಯ ಬೆಂಬಲವಿದೆ. ಕಾಂಗ್ರೆಸ್ ಹಾಗೂ ಎಡಪಕ್ಷಗಳು ನಕ್ಸಲರ ಬಗ್ಗೆ ಮೃದು ಧೋರಣೆ ಹೊಂದಿವೆ. ಕಾಂಗ್ರೆಸ್‌ನ ವಕ್ತಾರೆ ಸುಪ್ರಿಯಾ ಶ್ರೀನೇಟ್ ಅವರು, ಇತ್ತೀಚೆಗೆ ನಕ್ಸಲರ ವಿರುದ್ಧದ ಕಾರ್ಯಾಚರಣೆಯಲ್ಲಿ ಸಾವಿಗೀಡಾದ 29 ನಕ್ಸಲರನ್ನು 'ಹುತಾತ್ಮರು' ಎಂದು ಬಣ್ಣಿಸಿದ್ದರು. 2010ರಲ್ಲಿ ಮಾವೋವಾದಿಗಳ ವಿರುದ್ಧ ವೈಮಾನಿಕ ಕಾರ್ಯಾಚರಣೆ ನಡೆಸಲು ಉದ್ದೇಶಿಸಿದ್ದ ಅಂದಿನ ಕೇಂದ್ರ ಗೃಹಮಂತ್ರಿ ಪಿ.ಚಿದಂಬರಂ ಅವರನ್ನು ಅಂದಿನ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿಗ್ವಿಜಯ್ ಸಿಂಗ್ 'ಇಂಟೆಲೆಕ್ಚುವಲ್ ಆರೋಗೆಂಟ್' (ಬೌದ್ಧಿಕ ದುರಹಂಕಾರಿ) ಎಂದು ಜರೆದಿದ್ದರು. ಈ ಹೇಳಿಕೆಯ ನಂತರ, ನಕ್ಸಲರ ಮೇಲೆ ನಡೆಸಲು ಉದ್ದೇಶಿಸಲಾಗಿದ್ದ ವೈಮಾನಿಕ ಕಾರ್ಯಾಚರಣೆಯನ್ನು ತಡೆಹಿಡಿಯಲಾಯಿತು. ದೇಶದ ಒಂದಿಷ್ಟು ವಿಶ್ವವಿದ್ಯಾಲಯಗಳ ಕೆಲ ಪ್ರಾಧ್ಯಾಪಕರುಗಳು, ಬರಹಗಾರರು, ಅಂಕಣಕಾರರು, ಸರಕಾರೇತರ ಸಂಘಟನೆಗಳ ಕಾರ್ಯಕರ್ತರು ಹಾಗೂ ಬುದ್ಧಿಜೀವಿಗಳು ನಕ್ಸಲರ ಪರವಾಗಿ ಮಾತನಾಡುತ್ತಾರೆ. ನಕ್ಸಲರನ್ನು 'ದಾರಿ ತಪ್ಪಿದ ದೇಶಪ್ರೇಮಿಗಳು' ಎಂದು ಇವರು ಬಣ್ಣಿಸುತ್ತಾರೆ. ಹೀಗಾಗಿ ಇಂಥವರನ್ನು ಸಿನಿಮಾ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ಅವರು 'ನಗರ ನಕ್ಸಲರು' ಎಂದು ಕರೆದಿದ್ದಾರೆ.

ಬಡತನ ಇರುವಲ್ಲಿ ಮತ್ತು ರಸ್ತೆ, ವಿದ್ಯುತ್, ನೀರು ಮೊದಲಾದ ಮೂಲಭೂತ ಸೌಕರ್ಯಗಳ ಕೊರತೆ ಇರುವಲ್ಲಿ ನಕ್ಸಲರು ತಮ್ಮ ಬೇರುಗಳನ್ನು ಗಟ್ಟಿಮಾಡಿಕೊಳ್ಳುತ್ತಾರೆ. ನಿರುದ್ಯೋಗಿ ಯುವಕರ ತಲೆಕೆಡಿಸಿ ದೇಶವಿರೋಧಿ ಚಟುವಟಿಕೆಗಳಲ್ಲಿ ತೊಡಗುವಂತೆ ಪ್ರೇರೇಪಿಸುತ್ತಾರೆ. ಆದರೆ, 2014ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರಕಾರವು, ವಿದ್ಯುತ್, ರಸ್ತೆ, ನೀರು, ಮೊಬೈಲ್ ಹಾಗೂ ಅಂತರ್ಜಾಲ ಸಂಪರ್ಕ ಮೊದಲಾದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುತ್ತಾ ಬಂತು. ದೇಶದ ಶೇ.99ರಷ್ಟು ಮನೆಗಳಿಗೆ ವಿದ್ಯುತ್ ಸಂಪರ್ಕ, ಶೇ.99.8ರಷ್ಟು ಮನೆಗಳಿಗೆ ಅಡುಗೆ ಅನಿಲ, ಶೇ.99ರಷ್ಟು ಮನೆಗಳಿಗೆ ಶೌಚಾಲಯ, ಶೇ.76ರಷ್ಟು ಮನೆಗಳಿಗೆ ಪೈಪ್ ಮೂಲಕ ಕುಡಿಯುವ ನೀರಿನ ಸಂಪರ್ಕ, ಜನಧನ್ ಖಾತೆ-ಆಧಾರ್-ಮೊಬೈಲ್ ಸಂಖ್ಯೆಗಳನ್ನು ಬೆಸೆಯುವ ಮೂಲಕ ಸರಕಾರಿ ಸಹಾಯಧನವನ್ನು ಸಂಪೂರ್ಣವಾಗಿ ಫಲಾನುಭವಿಗಳಿಗೆ ತಲುಪಿಸುವಿಕೆ ಮೊದಲಾದ ಉಪಕ್ರಮಗಳಿಂದಾಗಿ ಕಳೆದ 10 ವರ್ಷಗಳಲ್ಲಿ ದೇಶದ 25 ಕೋಟಿಗೂ ಹೆಚ್ಚು ಜನರು ಬಡತನ ರೇಖೆಯಿಂದ ಮೇಲೆ ಬಂದಿದ್ದಾರೆ. ಈ ಎಲ್ಲಾ ಕಾರಣಗಳಿಂದ ಜನರಿಗೆ ಸರಕಾರದ ಮೇಲೆ ಅಷ್ಟಾಗಿ ರೋಷ ಇಲ್ಲದಿರುವುದರಿಂದ, ನಕ್ಸಲ್ ಹೋರಾಟಗಳೆಡೆಗೆ ಜನರನ್ನು ಸೆಳೆಯಲು ಮಾವೋವಾದಿಗಳಿಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ದೇಶದಲ್ಲಿ ಕೆಂಪು ಉಗ್ರವಾದವು ಮೂಲೆಗುಂಪಾಗುತ್ತಿದೆ.

**(ಲೇಖಕರು ಹವ್ಯಾಸಿ ಬರಹಗಾರರು)**

## ಹಿತೋಪದೇಶ

**ನಿತ್ಯಾನಂದ ಹೆಗಡೆ, ಮೂರೂರು**

### ಚಾರಿತ್ರ್ಯ ಹಾಳಾದರೆ ಎಲ್ಲವೂ ಹಾಳಾದಂತೆ

ಒಬ್ಬ ಶಿಕ್ಷಕನಿರಲಿ, ಬ್ಯಾಂಕ್ ಅಧಿಕಾರಿಯಿರಲಿ, ಗುತ್ತಿಗೆದಾರನಿರಲಿ, ಮಠಾಧೀಶನಿರಲಿ, ರಾಜಕಾರಣಿ-ವೈದ್ಯ-ಪತ್ರಕರ್ತನೇ ಆಗಿರಲಿ, ಅವಿರತ ಶ್ರಮ ಹಾಗೂ ಮೇರುಸಾಧನೆಗಳ ನಂತರವೂ ತನ್ನ ಖಾಸಗಿ ವ್ಯಕ್ತಿತ್ವದಲ್ಲಿ ಸಣ್ಣ ಕಪ್ಪುಚುಕ್ಕೆಯನ್ನೂ ಹೊಂದಿರಬಾರದು. ಅದರಲ್ಲೂ, ಹೆಣ್ಣಿನ ಮೋಹದ ಅನೈತಿಕತೆ ಹೊಂದಿದಲ್ಲಿ ಅವನ ಸಕಲಗುಣವನ್ನೂ ಮಸಿನುಂಗಿಬಿಡುತ್ತದೆ. ಇದು ಭಾರತದ ಕೆಲವು ಸಿದ್ಧ-ಪ್ರಸಿದ್ಧರನ್ನಷ್ಟೇ ಅಲ್ಲ, ಅಮೆರಿಕದ ಡೊನಾಲ್ಡ್ ಟ್ರಂಪ್‌ರನ್ನೂ ಕಾಡದೇ ಬಿಟ್ಟಿಲ್ಲ, ಪಾಕಿಸ್ತಾನದ ಖಾನ್‌ಗಳನ್ನೂ ಬಿಟ್ಟಿಲ್ಲ.

ಸಾರ್ವಜನಿಕ ರಂಗದಲ್ಲಿ ಇರುವಾತ ತನ್ನ ವಿಕ್ಷಿಪ್ತ ನಡವಳಿಕೆಯಿಂದಾಗಿ ಮಾಡಿಕೊಂಡ ಹಗರಣಗಳಲ್ಲಿ ಹಣ-ಹೆಂಡಕ್ಕೆ ಸಂಬಂಧಿಸಿದ್ದನ್ನು ಜನ ಮರೆತಾರು; ಆದರೆ ಹೆಣ್ಣುಬಾಕತನವನ್ನು ಕ್ಷಮಿಸಲಾರರು. ಇದು ಗೊತ್ತಿದ್ದರೂ, ಕಾಮದ ಸೆಳೆತಕ್ಕೆ ಸಿಲುಕಿದ ಕೆಲವರಿಗೆ ಸಮಾಜ ಏನೇ ಅನ್ನಲಿ ಅವೆಲ್ಲಾ ನಗಣ್ಯವಾಗಿಬಿಡುತ್ತವೆ. ಆಮೇಲೆ, ಕಳೆದುಕೊಂಡ ಮಾನವನ್ನು ಹಿಂಪಡೆಯಲು ಎಂದೆಂದಿಗೂ ಸಾಧ್ಯವಾಗದೆ ಜೀವನಪೂರ್ತಿ ಮರುಕಪಡಬೇಕಾಗುತ್ತದೆ. ಕಾನೂನು ಕುಣಿಕೆಯಿಂದ ಪಾರಾಗಿ ಬಂದರೂ ಸಾಮಾಜಿಕವಾಗಿ ಆತ ಪಾರಾಗಲಾರದ ಕೂಪದಲ್ಲಿ ಸಿಲುಕಿಬಿಡುತ್ತಾನೆ.




ಇಂಥ ಅವಗುಣ ಎಲ್ಲಿ ಸರ್ವನಿಷಿದ್ಧವೋ ಇತ್ತೀಚೆಗೆ ಅಲ್ಲೇ ಕಾಣಬರುತ್ತಿರುವುದು ವಿಪರ್ಯಾಸ. ಸರ್ವಸಂಗ ಪರಿತ್ಯಾಗಿಗಳೆನಿಸಿಕೊಂಡ ಕೆಲ ಸನ್ಯಾಸಿಗಳೂ ಅದೇನೋ ಆಕರ್ಷಣೆಗೆ ಒಳಗಾಗಿ, ತಾವು ಕುಳಿತ ಪೀಠದ ಘನತೆಯನ್ನೂ ಮರೆತು, ಹೆಸರನ್ನು ಕೆಡಿಸಿಕೊಂಡಿದ್ದನ್ನು ಕಂಡಿದ್ದೇವೆ. ನಂತರ ಅವರು ಜೈಲು ಪಾಲಾದುದೋ, ದೇಶ ಬಿಟ್ಟು ಓಡಿಹೋದುದೋ ಇವೆ. ಇವರೆಲ್ಲ ತಮ್ಮಂಥ ಬೇರೆ ಮನುಷ್ಯರು ಮೌಲ್ಯ ಕಳೆದುಕೊಂಡಿದ್ದನ್ನು ನೋಡಿಯೂ ಪಾಠ ಕಲಿಯದಿರುವುದು ದುರ್ದೈವ ಅಂತಲೇ ಹೇಳಬೇಕು.

ಮಹಾ ಉದ್ದಿಮೆದಾರ ವಿಜಯ್ ಮಲ್ಯ ಒಂದು ಕಾಲಕ್ಕೆ ಭಾರತದಲ್ಲಿ ಶುರುಮಾಡಿದ ತಮ್ಮ ವ್ಯವಹಾರ-ವಹಿವಾಟಿನ ಕಬಂಧ ಬಾಹುವನ್ನು ಮತ್ತಷ್ಟು ಚಾಚಿ ಸಾಕಷ್ಟು ಕಡೆ ಆವರಿಸಿಕೊಂಡರು; ಆದರೆ ಹೆಣ್ಣಿನ ಶೋಕಿಯಲ್ಲಿ ಸಿಲುಕಿ ಎಲ್ಲವನ್ನೂ ಕಳೆದುಕೊಂಡು ವಿದೇಶಕ್ಕೆ ಪರಾರಿಯಾದರು. ಇದು ಬಹುತೇಕರಿಗೆ ಗೊತ್ತಿರುವ ಸಂಗತಿಯೇ. ಇಂತಿಪ್ಪ ಹಂಗಾಮಿನಲ್ಲೇ ನಮ್ಮ ಕರ್ನಾಟಕದ ಕೆಲ ರಾಜಕಾರಣಿಗಳಿಗೆ ಮತ್ತೆ ಅದೇಕೆ ಇಂಥ ದುರ್ವರ್ತನೆಗಳು ಕೈಬೀಸಿ ಕರೆದವೋ ಹೇಳಲಾಗುತ್ತಿಲ್ಲ. ಕೆಲ ವರ್ಷಗಳ ಹಿಂದೆ ಕನ್ನಡದ ಮೇರು ಪತ್ರಕರ್ತರೊಬ್ಬರು ಅಂಥದ್ದೇ ಹಾದಿ ತುಳಿದು, ನಂತರ ಅದನ್ನು ಸಮರ್ಥಿಸಹೋಗಿ ನಗೆಪಾಟಲಿಗೆ ಈಡಾದುದನ್ನು ಮತ್ತು ತಮ್ಮ ದುಷ್ಕರ್ಮಗಳಿಂದಾಗಿ ತಾವೇ ತಮ್ಮ ಚಟ್ಟ ಕಟ್ಟಿಕೊಂಡುದನ್ನೂ ಜನರು ಮರೆತಿಲ್ಲ. ಪರಸ್ಪರ ಒಪ್ಪಿಗೆಯಲ್ಲಿ ನಡೆವ ಇಂಥ ಕಾಮದಾಟಗಳನ್ನು ಕಾನೂನು ಕೊನೆಗೆ ಕ್ಷಮಿಸಿ ಕಳುಹಿಸಿಬಿಡಬಹುದಾದರೂ, ಸತ್ಪ್ರಜೆಗಳು ಎಂದಿಗೂ ಕ್ಷಮಿಸಿ ಮರೆಯಲಾರರು. ಕಾಲ ಬದಲಾಗಿರಬಹುದು, ಆದರೆ ಮೌಲ್ಯಗಳು ಬದಲಾಗಲಾರವು. ಇಂದಿಗೂ ಜಗತ್ತಿನಲ್ಲಿ ಅನೈತಿಕತೆಯನ್ನು ಸಾರ್ವಜನಿಕವಾಗಿ ಒಪ್ಪುವ ಮನಸ್ಥಿತಿ ಬಾರದಿರುವುದು ದೊಡ್ಡ ಪುಣ್ಯವೆಂತಲೇ ಹೇಳಬೇಕು.

"When Wealth is lost, nothing is lost. When Health is lost, something is lost. When Character is lost, everything is lost ' ಎಂಬುದೊಂದು ಸಾರ್ವಕಾಲಿಕ ಉಕ್ತಿಯಿದೆ. ಈ ಮಾತನ್ನು ಅದ್ಯಾರೋ ಪ್ರಾಜ್ಞನೇ ಹೇಳಿರಬೇಕು. ವಿಶ್ವಾಮಿತ್ರನಂಥ ಸನ್ಯಾಸಿಯು ಮೇನಕೆಯ ಸಂಗ ಮಾಡಿ, ತನ್ನ ಸಾವಿರಾರು ವರ್ಷಗಳ ತಪಸ್ಸನ್ನು ಹಾಳುಮಾಡಿಕೊಂಡ, ವಸಿಷ್ಠರಂಥವರಿಂದ ಗೇಲಿಗೊಳಗಾದ. ಆಮೇಲೆ ಅದೇನೆಲ್ಲಾ ಸಾಧನೆ ಮಾಡಿದನಾದರೂ ಕಪ್ಪುಚುಕ್ಕೆ ಅವನನ್ನು ಬಿಡಲಿಲ್ಲ. ಜನನಾಯಕರೆನಿಸಿಕೊಂಡವರು, ಉನ್ನತ ಆಧ್ಯಾತ್ಮಿಕ ಸಾಧಕರೆನಿಸಿಕೊಂಡವರೇ ಈ ಸತ್ಯವನ್ನು ಅಲಕ್ಷಿಸಿದರೆ, ಭಗವಂತನೇ ಬಂದರೂ ಅವರನ್ನು ಮೇಲೆತ್ತಲಾಗದು. ಇದು ಸಂಬಂಧಪಟ್ಟವರ ಗಮನದಲ್ಲಿರಲಿ.

**(ಲೇಖಕರು ಪದವಿಪೂರ್ವ ಶಿಕ್ಷಣ ಇಲಾಖೆಯ ನಿವೃತ್ತ ಪ್ರಾಚಾರ್ಯರು)**

# ದೇಶದ ನಾಡಿಮಿಡಿತ ಅರಿಯಲು ಇವರು ವಿಫಲರಾಗುತ್ತಿರುವುದೇಕೆ?

**ವಾಸ್ತವಿಕತೆಯಿಂದ ಬಹಳ ದೂರವಿರುವ ಇಂದಿನ ಕಾಂಗ್ರೆಸ್ ನಾಯಕತ್ವವು ಅಸಮಂಜಸ ಘೋಷಣೆಗಳನ್ನು ಮಾಡುತ್ತಿದೆ. ದೇಶದ ಹಿತ ಮತ್ತು ಸಮಗ್ರತೆಯನ್ನು ಕಾಯುವ ಒಂದು ಸದೃಢ ವಿರೋಧ ಪಕ್ಷವಾಗಿ ಕಾಂಗ್ರೆಸ್ ತನ್ನ ಅಸ್ತಿತ್ವವನ್ನು ಕಾಪಿಟ್ಟುಕೊಳ್ಳಲಿ ಎಂದು ನಾವೆಲ್ಲ ಬಯಸುತ್ತೇವೆ. ಈ ಕುರಿತಾಗಿ ಆ ಪಕ್ಷದ ನಾಯಕರು ಚಿಂತನೆ ನಡೆಸಬೇಕಿದೆ. ಅಯೋಧ್ಯೆಯ ರಾಮಮಂದಿರದ ಉದ್ಘಾಟನೆಯಲ್ಲಿ ಪಾಲ್ಗೊಳ್ಳದಿದ್ದುರು ಕಾಂಗ್ರೆಸ್ ಪಕ್ಷದ ಇತಿಹಾಸದ ಪುಟಗಳಲ್ಲಿ ಒಂದು ವೈರುಧ್ಯದ ಘಟನೆಯಾಗಿ ದಾಖಲಾಗಲಿದೆ.**



**ಗಂಟಾಘೋಷ**
**ಗುರುರಾಜ್ ಗಂಟಿಹೊಳೆ**
vveditoped@gmail.com

ಹೌದು, ನಾವೀಗ ಮೇಲಿನಂತೆ ಪ್ರಶ್ನೆ ಕೇಳಲೇಬೇಕಿದೆ. ಪ್ರಶ್ನಿಸುವುದು, ಜನಹಿತಕ್ಕಾಗಿ ದನಿಯೆತ್ತುವುದು ಸಂವಿಧಾನವು ನಮಗೆ ಕೊಟ್ಟಿರುವ ಹಕ್ಕೂ ಹೌದು. ಆ ಪ್ರಶ್ನೆ ಯಾರ ಕುರಿತಾಗಿ ಎಂಬುದನ್ನು ಮುಂದಿನ ಸಾಲುಗಳಲ್ಲಿ ನೋಡೋಣ.

ಅಸಾಂವಿಧಾನಿಕ ಉಚಿತ ಗ್ಯಾರಂಟಿ ಘೋಷಣೆಗಳನ್ನು ಮತದಾನದ ಸಮಯದಲ್ಲಿ ಮಾತ್ರ ಮಾಡುವುದು ಸರಿಯೋ ತಪ್ಪೋ ಎಂಬುದನ್ನು ಈ ದೇಶದ ನ್ಯಾಯಾಂಗ ವ್ಯವಸ್ಥೆ ಮತ್ತು ಸ್ವತಂತ್ರ ಸಂಸ್ಥೆಯಾದ ಚುನಾವಣಾ ಆಯೋಗ ತೀರ್ಮಾನ ಮಾಡಿಕೊಳ್ಳಲಿ. ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಏಳೂವರೆ ದಶಕಗಳು ಕಳೆದಿದ್ದರೂ, ಕೆಲ ವಿಷಯಗಳಲ್ಲಿ ಇನ್ನೂ ಸುಧಾರಣೆಯಾಗಿಲ್ಲ, ಕೆಲ ವಿಚಾರಗಳಲ್ಲಿ ಪ್ರಖರ ನಿರ್ಧಾರಗಳಿಗೆ ಬರಲಾಗಿಲ್ಲ. ಇದು ಸಂವಿಧಾನಾತ್ಮಕ ವೈಫಲ್ಯವೋ ಅಥವಾ ಈ ವ್ಯವಸ್ಥೆಯೇ ಹೀಗೆ ಎಂದು ಸುಮ್ಮನಿರುವ ಜನಸಾಮಾನ್ಯರ ವೈಫಲ್ಯವೋ ಎಂಬುದನ್ನು ಅವರವರ ವಿವೇಚನೆಗೆ ಬಿಡೋಣ.

ಭಾರತದ ರಾಜಕೀಯದಲ್ಲಿ ಅತ್ಯಂತ ಹಳೆಯ ಪಕ್ಷವಾದ ಕಾಂಗ್ರೆಸ್, ಇಂದು ಕೂಡ ಚುನಾವಣೆ ಗೆಲ್ಲಬೇಕಾದರೆ ಉಚಿತ ಘೋಷಣೆಗಳ ಮೊರೆಹೋಗಬೇಕಾಗಿರುವುದು ಮಾತ್ರ ವಿಪರ್ಯಾಸ. ಸುಮಾರು 70 ವರ್ಷಗಳಿಂದ, ಚುನಾವಣಾ ಗೆಲುವೊಂದನ್ನೇ ಗಮನದಲ್ಲಿಟ್ಟುಕೊಂಡು ಈ ದೇಶದ ಕೆಳ ಮಧ್ಯಮ, ಬಡವ ಮತ್ತು ಅಲ್ಪಸಂಖ್ಯಾತ ಜನರನ್ನು ಉದ್ದೇಶಿಸಿ ಏನಾದರೊಂದು ಆಕರ್ಷಕ ಘೋಷಣೆಯನ್ನು ಮಾಡುತ್ತಲೇ ಬಂದಿದೆ ಈ ಪಕ್ಷ. ಈ ಹಿಂದಿನ ಘೋಷಣೆಗಳು ಆರ್ಥಿಕತೆಯಲ್ಲಿ ಸೃಷ್ಟಿಸಿರುವ ಅಧ್ವಾನಗಳ ಪರಿಯು, ಆಡಳಿತದ ಒಳಗಿರುವ ಅಧಿಕಾರಿಗಳನ್ನೋ, ಕೈ ಪಕ್ಷದ ಇತರೆ ಶಾಸಕರನ್ನೋ ಕೇಳಿದರೆ ತಿಳಿಯುತ್ತದೆ.

ಆ ಇಲಾಖೆಯ ಹಣವನ್ನು ಇನ್ಯಾವುದೋ ಘೋಷಣೆಗೆ ಹೊಂದಿಸಲು ಒದ್ದಾಡುವುದು, ಎಸ್‌ಸಿ/ಎಸ್‌ಟಿ/ಒಬಿಸಿ ಸಮುದಾಯಗಳಿಗೆ ಮೀಸಲಿಟ್ಟ ಹಣವನ್ನು ಮತ್ಯಾವುದೋ ಗ್ಯಾರಂಟಿಗೆ ಬಳಸುವುದು, ಜತೆಗೆ ಆರ್ಥಿಕ ಶಿಸ್ತುಗಳಿಲ್ಲದ ಆಡಳಿತ ಮಾಡುವುದು, ಜನರು ಕೇವಲ ಉಚಿತ ಗ್ಯಾರಂಟಿಗಳನ್ನು ನಂಬಿ ಮತ ಹಾಕುವಂತಾಗುವುದು ಇವೆಲ್ಲ ವಿಪರ್ಯಾಸದ ವಿಚಾರಗಳೇ. ಸದ್ಯ ಮತ್ತದೇ, ಜಾರಿಗೊಳಿಸಲು ಅಸಾಧ್ಯವಾದ, ದೇಶದ ಆರ್ಥಿಕತೆಯನ್ನು ಅಧೋಗತಿಗೆ ತಳ್ಳಬಲ್ಲ ಹಲವು ಘೋಷಣೆಗಳನ್ನು ಕಾಂಗ್ರೆಸ್ ಪಕ್ಷ ಮಾಡಿದೆ.

ಸುಮ್ಮನೆ ಯೋಚಿಸಿ, ಪ್ರತಿ ಮಹಿಳೆಗೆ ವಾರ್ಷಿಕ 1 ಲಕ್ಷ ರುಪಾಯಿಗಳು (ತಿಂಗಳಿಗೆ 8,333 ರು.) ಅಂದರೆ, ದೇಶದಲ್ಲಿರುವ ಒಟ್ಟು 66 ಕೋಟಿಗೂ ಹೆಚ್ಚಿನ (ಶೇ.48.5ರಷ್ಟು) ಮಹಿಳೆಯರಿಗೆ ಇದು ಅನ್ವಯವಾಗಲಿದೆ. ಕೈ ಪಕ್ಷದ ಉಳಿದ ಘೋಷಣೆಗಳನ್ನು ಪಕ್ಕಕ್ಕಿಡಿ. ಇದೊಂದೇ ಸಾಕು, ದೇಶದ ಆರ್ಥಿಕತೆಯ ಬಗ್ಗೆ, ಆಂತರಿಕ ಸುರಕ್ಷತೆ ಬಗ್ಗೆ, ಮಾನವ ಪರಿಶ್ರಮದ ಬಗ್ಗೆ ಮತ್ತು ದುಡಿದು ತಿನ್ನುವ ಸಮತೋಲಿತ ಸಹಜಸೂತ್ರದ ಬಗ್ಗೆ ಕಾಂಗ್ರೆಸ್ ನಾಯಕರು ಮತ್ತು ಇಂಥ ಯೋಜನೆ ರೂಪಿಸುವವರು ಎಷ್ಟು ಕಾಳಜಿ ತೋರಿದ್ದಾರೆಂದು ತಿಳಿಯುತ್ತದೆ. ದೇಶದ 66 ಕೋಟಿಗೂ ಹೆಚ್ಚಿನ ಮಹಿಳೆಯರಿಗೆ ಹಂಚಲು ಸುಮಾರು 66 ಲಕ್ಷ ಕೋಟಿಗೂ ಅಧಿಕ ಮೊತ್ತದ ಹಣ ಬೇಕು. ಎಲ್ಲಿಂದ ತರುತ್ತಾರೆ?!

ಜತೆಗೆ, ಇಂಥ ವಿವೇಕರಹಿತ ಘೋಷಣೆ ಮಾಡಲಾದರೂ ಒಂದು ಇತಿಮಿತಿ ಬೇಡವೇ? ಭಾರತದ ಒಟ್ಟು ಬಜೆಟ್ ಮೊತ್ತವೇ 45 ಲಕ್ಷ ಕೋಟಿ (2023) ಇರುವಾಗ, 66 ಲಕ್ಷ ಕೋಟಿ ಹಣವನ್ನು ಕೇವಲ ಮಹಿಳೆಯರಿಗೆ ಹಂಚಿದರೆ, ಇನ್ನುಳಿದ 94 ಕೋಟಿ ಜನಕ್ಕೆ ಏನು ಕೊಡುತ್ತಾರೆ ಎಂಬುದೇ ಬಹುದೊಡ್ಡ ಸೋಜಿಗದ ಸಂಗತಿ. ನಮ್ಮ ಸಮಾಜದಲ್ಲಿ ಯುವಕ-ಯುವತಿಯರಿದ್ದಾರೆ. ಇವರ ಕಲಿಕೆಯು ತಂದೆ-ತಾಯಿಗಳ ದುಡಿಮೆಯ ಮೇಲೆ ನಿಂತಿದೆ. ವೈದ್ಯಕೀಯ ಸೇರಿದಂತೆ ಇತರೆ ಉನ್ನತ ಶಿಕ್ಷಣಕ್ಕೆ ಲಕ್ಷಾಂತರ ಹಣ ಬೇಕು. ಇವರು ತಿಂಗಳಿಗೆ ಕೊಡುವ 8 ಸಾವಿರ ರುಪಾಯಿ, ಮಹಿಳೆಯರನ್ನು ಅದುಹೇಗೆ ಸ್ವಾವಲಂಬಿಯಾಗಿಸುತ್ತದೆ ಎಂಬುದೇ ನಮ್ಮ ಚಿಂತೆಯಾಗಿದೆ.

ಇದರೊಟ್ಟಿಗೆ, 66 ಲಕ್ಷ ಕೋಟಿ ಹಣವನ್ನು ಯಾವ ಮೂಲದಿಂದ ಹೊಂದಿಸುತ್ತಾರೆ ಎಂಬುದನ್ನೂ ಇವರು ಎಲ್ಲೂ ಹೇಳಿಲ್ಲ. ಮತ್ತದೇ 'ಆ ಇಲಾಖೆಯಿಂದ ತೆಗೆದು ಈ ಗ್ಯಾರಂಟಿಗೆ' ಎಂಬ ಅಪ್ರಬುದ್ಧ ಹೊಂದಾಣಿಕೆ ಮಾಡುವ ಹುನ್ನಾರ ಇವರಲ್ಲಿದ್ದರೆ, ರಕ್ಷಣಾತ್ಮಕ ವಿಚಾರದಲ್ಲಿ ಇಡೀ ದೇಶವನ್ನೇ ಭಯಂಕರ ಅಪಾಯದ ಕೂಪಕ್ಕೆ ಈ ಕೈಪಕ್ಷ ತಳ್ಳಲಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಯಾಕೆಂದರೆ, ನಮ್ಮ ದೇಶದ ರಕ್ಷಣಾ ಬಜೆಟ್‌ನಿಂದ ತೆಗೆದು ಇನ್ಯಾವುದಕ್ಕೋ ಕೊಡಲೂ ಇವರು ಹಿಂದೆ-ಮುಂದೆ ನೋಡುವುದಿಲ್ಲ. ದೇಶದ ಯುವಜನತೆಯು ಅಲ್ಪಾವಧಿಯಲ್ಲಿ ದೇಶಸೇವೆ ಮಾಡಲು ರೂಪಿಸಿರುವ 'ಅಗ್ನಿವೀರ' ಯೋಜನೆಯನ್ನೇ ನಿಷೇಧಿಸುವುದಾಗಿ ಕಾಂಗ್ರೆಸ್ ನಾಯಕರು ಈಗಾಗಲೇ ಸ್ಪಷ್ಟವಾಗಿ ಹೇಳುವ ಮೂಲಕ ಸೈನ್ಯದಲ್ಲೂ ರಾಜಕೀಯವನ್ನು ತೂರಿಸಿದ್ದಾರೆ. ಸುಮಾರು 6 ಲಕ್ಷ ಕೋಟಿಯಷ್ಟಿರುವ ನಮ್ಮ ರಕ್ಷಣಾ ಬಜೆಟ್‌ನ 10 ಪಟ್ಟು ಹಣವನ್ನು, ಕೇವಲ ಚುನಾವಣೆಯಲ್ಲಿ ಗೆಲ್ಲುವ ವಿಚಾರ ಇಟ್ಟುಕೊಂಡು ಗ್ಯಾರಂಟಿಗೆ ಘೋಷಿಸಿರುವುದನ್ನು ದೇಶದ ಯಾವ ಮಾಧ್ಯಮಗಳೂ, ತಥಾಕಥಿತ ಬುದ್ಧಿಜೀವಿಗಳೂ ಪ್ರಶ್ನಿಸದಿರುವುದು ಒಂದು ಆಘಾತಕಾರಿ ಬೆಳವಣಿಗೆ.

ಪಕ್ಕದ ಪುಟ್ಟ ರಾಷ್ಟ್ರ ಮಾಲ್ಡೀವ್ಸ್ ಎದುರಿಸಿದ ಮತ್ತು ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟು ನಿಮ್ಮ ಗಮನಕ್ಕೆ ಬಂದಿರಲೂಬಹುದು. ಕೇವಲ ಪ್ರವಾಸಿಗರನ್ನೇ ನಂಬಿ ಬದುಕುತ್ತಿರುವ ದೇಶವದು. ಆದರೆ ಅಪ್ರಬುದ್ಧ ರಾಜಕಾರಣಿಗಳ ಅವಿವೇಕದ ನಡೆಯಿಂದಾಗಿ ಆ ಇಡೀ ದೇಶದ ಆರ್ಥಿಕತೆಯೇ ಕುಸಿದುಬಿತ್ತು. ತಡವಾಗಿಯಾದರೂ ಅಲ್ಲಿನ ರಾಜಕಾರಣಿಗಳು ತಮ್ಮ ಅಹಂ ಅನ್ನು ಬದಿಗಿಟ್ಟು ಭಾರತೀಯರ ಹಾಗೂ ನಮ್ಮ ಪ್ರಧಾನಿಯವರ ಬಳಿ ಸಾರ್ವಜನಿಕವಾಗಿ ಕ್ಷಮೆ ಯಾಚಿಸಿದರು. ವಿಶ್ವದ ಇತರೆ ರಾಷ್ಟ್ರಗಳ ಮುಂದೆ ಮಾಲ್ಡೀವ್ಸ್ ಸಾಲದ ಭಿಕ್ಷೆಗೆ ನಿಲ್ಲುವಂತಾಯಿತು. ಆರ್ಥಿಕತೆಯ ವಾಸ್ತವಾಂಶ ಹೀಗಿರುವಾಗ, ಚಿದಂಬರಂ, ರಾಜನ್ ಸೇರಿದಂತೆ ಬಹು 'ದೊಡ್ಡ' ಆರ್ಥಿಕ 'ತಜ್ಞ'ರನ್ನು ಹೊಂದಿರುವ ಒಂದು ಹಳೆಯ ರಾಜಕೀಯ ಪಕ್ಷದ ದೂರದೃಷ್ಟಿಯು, ರಾಷ್ಟ್ರದ ಸುರಕ್ಷತೆ ಮತ್ತು ಅಭಿವೃದ್ಧಿಯ ವಿಚಾರದಲ್ಲಿ ಇಷ್ಟು ಕೆಳಮಟ್ಟಕ್ಕೆ ಕುಸಿದಿರುವುದು ಈ ಪಕ್ಷದ ನೈತಿಕ ಮತ್ತು ಬೌದ್ಧಿಕ ಅಧಃಪತನಕ್ಕೆ ಸಾಕ್ಷಿ.



ಪ್ರತಿಷ್ಠಿತ ಆಕ್ಸ್‌ಫರ್ಡ್ ಯೂನಿಯನ್ ಸಂಸ್ಥೆಯು Modi's India is on the right path ಎಂಬ ವಿಷಯದ ಕುರಿತಾಗಿ ಹಲವು ಪ್ರಾಜ್ಞರ ಜತೆಗೆ ಒಂದು ಅಧಿಕೃತ ಸಂವಾದವನ್ನು ಏರ್ಪಡಿಸಿತ್ತು. ಇದರಲ್ಲಿ ಭಾರತದ Firstpost ಎಂಬ ಸುದ್ದಿಸಂಸ್ಥೆಯ ಸಂಸ್ಥಾಪಕಿ, ಖ್ಯಾತ ನಿರೂಪಕಿ ಪಲ್ಕಿ ಶರ್ಮಾ ಉಪಾಧ್ಯಾಯ್ ಕೂಡ ಭಾಗವಹಿಸಿದ್ದರು. A Wonderful Glimpse of transformative INDIA ಎಂಬ ವಿಷಯದ ಮೇಲೆ ನಡೆದ ಈ ಚರ್ಚೆಯು, ಮೋದಿಯವರು ಮಾಡಿದ ಡಿಜಿಟಲ್ ಕ್ರಾಂತಿ, ಸಾರಿಗೆ, ರೈಲು ಮತ್ತು ಆರ್ಥಿಕತೆಯಲ್ಲಾದ ಬಹುದೊಡ್ಡ ಬೆಳವಣಿಗೆ/ಬದಲಾವಣೆಯ ಕುರಿತು ಸ್ಪಷ್ಟ ಮಾಹಿತಿಗಳನ್ನು ಹೊಮ್ಮಿಸಿತು. ಮಾತ್ರವಲ್ಲ, ಇಲ್ಲಿಯವರೆಗೆ ಮಾಡುತ್ತ ಬಂದಿದ್ದ 'ಪ್ರಾಯೋಜಿತ ಪಿತೂರಿ'ಗಳನ್ನು ತೊಡೆದು ಹಾಕುವಲ್ಲಿ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತ ಸರಕಾರದ ವಾಸ್ತವವನ್ನು ತೆರೆದಿಡುವಲ್ಲಿ ಅದು ಸಫಲವಾಯಿತು.

ಹೀಗೆ ದೇಶದ ವಿಚಾರ ಬಂದಾಗಲೆಲ್ಲಾ, ರಾಷ್ಟ್ರಪ್ರೇಮಿಗಳು ರಾಷ್ಟ್ರದ ಪರವಾಗಿ ನಿಲ್ಲಲು ತಮಗೆ ಸಿಗುವ ಯಾವ ಅವಕಾಶಗಳನ್ನೂ ಬಿಡಲಾರರು ಎಂಬುದು ಯಾವ ಕಾಲಕ್ಕೂ ಸಾಬೀತಾಗಿದೆ. ಇದನ್ನು ನಾವು ಮರೆಯಬಾರದು. ಅಂದಿನ ಮಂಗಲ ಪಾಂಡೆಯಿಂದ ಮೊದಲ್ಗೊಂಡು ಇಂದಿನ ಯುವಕ- ಯುವತಿಯರವರೆಗೆ, ದೇಶದ ಏಕತೆಯ ವಿಚಾರಕ್ಕೆ ಧಕ್ಕೆ ಬಂದಾಗಲೆಲ್ಲಾ ಕಾಲಘಟ್ಟ ಮೀರಿ ಬೆಂಬಲಕ್ಕೆ ನಿಂತಿದ್ದಾರೆ. ಈ ಮಣ್ಣಿನ ಗುಣವೇ ಅಂಥದ್ದು. ಅಪಾಯದ ಮುನ್ಸೂಚನೆ ಬಂದಾಗಲೆಲ್ಲ ಪ್ರಖರ ನಾಯಕತ್ವಕ್ಕೆ, ಯುವ ಸಿಂಹ-ಸಿಂಹಿಣಿಯರಿಗೆ ಜನ್ಮನೀಡುತ್ತದೆ ನಮ್ಮ ಭವ್ಯಭಾರತ.

ಎಲ್ಲರೂ ಚುನಾವಣೆಯಲ್ಲಿ ಗೆಲ್ಲುವ ಧಾವಂತಕ್ಕೆ ಬಿದ್ದು ಬಿಸಿಲಿನ ಬೇಗೆಯಲ್ಲೂ ಪ್ರಚಾರ ಮಾಡುತ್ತಿರುವಾಗ ಕಾಂಗ್ರೆಸ್ ಪಕ್ಷದ ವಿದೇಶ ವಿಭಾಗದ ಮುಖ್ಯಸ್ಥ ಸ್ಯಾಮ್ ಪಿತ್ರೋಡಾ ಅದೇನೋ ವರಾತ ತೆಗೆದಿದ್ದಾರೆ; ಪ್ರಸ್ತುತ ರಾಹುಲ್ ಗಾಂಧಿಯವರ ಮಾರ್ಗದರ್ಶಕರಾಗಿರುವ ಅವರು ಅಮೆರಿಕದಲ್ಲಿದ್ದುಕೊಂಡೇ, 'ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ Inheritance Tax Act ಜಾರಿಗೆ ತರಲಾಗುವುದು. ಈ ಕಾನೂನಿನ ಅಡಿಯಲ್ಲಿ ಪಿತ್ರಾರ್ಜಿತ ಆಸ್ತಿಯ ಸ್ವಲ್ಪ ಭಾಗವು ಸರಕಾರಕ್ಕೆ ಸೇರತಕ್ಕದ್ದು. ಇದನ್ನು ದೇಶದ ಹಿಂದುಳಿದ ವರ್ಗಕ್ಕೆ ಹಂಚಲಾಗುವುದು' ಎಂಬ ಹೇಳಿಕೆ ನೀಡಿದರು. ಇದನ್ನು ರಾಹುಲ್ ಗಾಂಧಿಯವರು ತಮ್ಮ ಚುನಾವಣಾ ಪ್ರಚಾರ ಭಾಷಣದಲ್ಲಿ ಮತ್ತೆ ಮತ್ತೆ ಪ್ರಸ್ತಾಪಿಸಿದರು.

ಇದೇ ವಿಷಯ ಕುರಿತಾಗಿ ಪ್ರಧಾನಿ ಮೋದಿಯವರು, 'ಕಾಂಗ್ರೆಸ್ ಪಕ್ಷವು ನೇರವಾಗಿ ಮಹಿಳೆಯರ ಮಂಗಳಸೂತ್ರಕ್ಕೆ ಕೈಹಾಕಿದೆ. ಆ ಮೂಲಕ, ಸ್ವಾಭಿಮಾನದಿಂದ ದುಡಿದು ಬದುಕುವ ಜನರ ಆಸ್ತಿಯನ್ನು ಕಬಳಿಸುವ ಹುನ್ನಾರದಲ್ಲಿದೆ. ದುಡಿದವರ ಆಸ್ತಿಯನ್ನು ಹೀಗೆ ಜನರಿಗೆ ಹಂಚುವ ಆಸಕ್ತಿಯಿದ್ದರೆ, ಇಂದಿರಾ ಗಾಂಧಿಯವರ ಕೋಟ್ಯಂತರ ರುಪಾಯಿ ಮೌಲ್ಯದ ಆಸ್ತಿಯನ್ನು ದೇಶಕ್ಕೆ ಹಂಚುವ ಸಂದರ್ಭ ಬಂದಾಗ, ರಾಜೀವ್ ಗಾಂಧಿಯವರು ಒಂದು ಕಾನೂನನ್ನೇ ಬದಲಾಯಿಸಿ ಎಲ್ಲ ಆಸ್ತಿಯನ್ನು ತಮ್ಮಲ್ಲಿಯೇ ಯಾಕೆ ಇಟ್ಟುಕೊಂಡರು? ಈ ದೇಶದ ಕಾನೂನುಗಳು ಕೆಲವೇ ಮನೆಯವರ ತಾಳಕ್ಕೆ ತಕ್ಕಂತೆ ಕುಣಿಯುವುದಕ್ಕೆ ಈ ದೇಶವೇನು ಪ್ರೈವೇಟ್ ಪ್ರಾಪರ್ಟಿ ಆಗಿದೆಯಾ?' ಎಂದು ತಮ್ಮ ಚುನಾವಣಾ ಭಾಷಣದಲ್ಲಿ ಕೇಳಿದರು. ಈ ಒಂದು ಕಾನೂನನ್ನು Estate Duty ಎಂದು 1953ರಲ್ಲಿ ಪರಿಚಯಿಸಲಾಗಿತ್ತು; ರಾಜೀವ್ ಗಾಂಧಿಯವರು ಅಧಿಕಾರಕ್ಕೆ ಬಂದ ಮೇಲೆ 1985ರಲ್ಲಿ ಇದನ್ನು ರದ್ದುಗೊಳಿಸಿದರು.

ಭಾಷಣ ಮುಂದುವರಿಸಿದ ಮೋದಿಯವರು, ''ಅಂದು ಮನಮೋಹನ್ ಸಿಂಗ್ ಅವರು, 'ದೇಶದ ಸಂಪನ್ಮೂಲಗಳ ಮೇಲೆ ಮುಸ್ಲಿಮರಿಗೆ ಮೊದಲ ಹಕ್ಕಿದೆ' ಎಂದರು. ಒಂದು ಸೆಕ್ಯುಲರ್ ದೇಶದ ಪ್ರಧಾನಿ ಹೀಗೆ ಮಾತನಾಡಬಹುದಾ?'' ಎಂದು ಕೇಳಿದರು. ''ಹಿಂದುಳಿದ ವರ್ಗಕ್ಕೆ ಮುಸ್ಲಿಮರನ್ನು ಸೇರಿಸುವ ಮೂಲಕ ಈ ಕಾಂಗ್ರೆಸ್ ಪಕ್ಷವು ಶ್ರಮಿಕರಿಗೆ, ಎಸ್‌ಸಿ/ಎಸ್‌ಟಿ/ಒಬಿಸಿ ಸಮುದಾಯದವರಿಗೆ ದ್ರೋಹ ಬಗೆಯುತ್ತಿದೆ. ಸಂವಿಧಾನದ ವಿರುದ್ಧವಾಗಿ, ಹಿಂಬಾಗಿಲಿನ ಮೂಲಕ ಈ ಪ್ರಮಾದವೆಸಗುತ್ತಿದೆ. ಈ ಹಿಂದೆ, ತೆಲಂಗಾಣದಲ್ಲಿ ಈ ಕುರಿತು 'ಪ್ರಾಯೋಗಿಕ ಪರೀಕ್ಷೆ' ಕೂಡ ಮಾಡಿದೆ'' ಎಂದರು.

ದೇಶವನ್ನು ಪ್ರಗತಿಯತ್ತ ಕೊಂಡೊಯ್ಯಬೇಕಾದ ರಾಜಕೀಯ ಪಕ್ಷವೊಂದು ಹೀಗೆ ಜಾತ್ಯತೀತತೆಯ ಹೆಸರಿನಲ್ಲಿ ಜನಸಾಮಾನ್ಯರ ಅರಿವಿಗೆ ಬಾರದಂತೆ ಹತ್ತು ಹಲವು ಸೂಕ್ಷ್ಮ ವಿಚಾರಗಳನ್ನು ತಿದ್ದುಪಡಿ ಕೂಡ ಮಾಡಿದೆ. ಅವುಗಳಲ್ಲಿ, Article -25, 28, 30(1950), HRCE Act (1951), HCB Act (1956), Secularism (1975), POW Act (1991), WAQF Act (1995), Ramsetu Fake Affidavit ಸೇರಿವೆ. ಜತೆಗೆ, ಹತ್ತು ಹಲವು ಕಾನೂನು ಮತ್ತು ನಿಯಮಗಳನ್ನು ಬದಲಾಯಿಸಿ ಜಾರಿಗೆ ತಂದಿದೆ. ಇವುಗಳ ಕುರಿತೂ ಪರಾಮರ್ಶೆಯಾಗಬೇಕಿದೆ.

ದೇಶದ ಆತ್ಮಗೌರವದ ಪ್ರತೀಕವಾದ ಶ್ರೀರಾಮ ದೇವರ ಮಂದಿರದ ಉದ್ಘಾಟನೆಗೆ ಒಂದು ರಾಷ್ಟ್ರೀಯ ಪಕ್ಷವಾಗಿ ಹೋಗದಿರುವುದು, ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷದ ಇತಿಹಾಸದ ಪುಟಗಳಲ್ಲಿ ಒಂದು ವೈರುಧ್ಯದ ಘಟನೆಯಾಗಿ ದಾಖಲಾಗಲಿದೆ. ಹಾಗೆಯೇ, ವಾಸ್ತವಿಕತೆಯಿಂದ ಬಹಳ ದೂರವಿರುವ ಇಂದಿನ ಕಾಂಗ್ರೆಸ್ ನಾಯಕತ್ವವು ಅಸಮಂಜಸ ಘೋಷಣೆಗಳನ್ನು ಮಾಡುತ್ತಿದೆ. ದೇಶದ ಹಿತವನ್ನು ಕಾಯುವ ಬದಲಾಗಿ, ಮೋದಿಯವರನ್ನು ಸೋಲಿಸುವುದಕ್ಕೆ ಮಾತ್ರವೇ ಚುನಾವಣಾ ಯುದ್ಧದಲ್ಲಿ ಪಾಲ್ಗೊಳ್ಳುತ್ತಿದೆ. ಇದರಿಂದಾಗಿ ಆ ಪಕ್ಷವು ಜನಮನ ಗೆಲ್ಲುವುದು ಸಾಧ್ಯವಾಗುತ್ತಿಲ್ಲ. ಅನೇಕ ಕಾಂಗ್ರೆಸ್ ನಾಯಕರು ನೀಡುತ್ತಿರುವ ಹೇಳಿಕೆಗಳನ್ನು ಒಟ್ಟಾರೆಯಾಗಿ ಗಮನಿಸಿದರೆ, ಪಕ್ಷವು ತನ್ನ ಭವಿಷ್ಯದ ಚಿಂತೆ ಬಿಟ್ಟು ಚರಮಗೀತೆಯ ರಚನೆಯತ್ತ ತೊಡಗಿಕೊಂಡಿದೆಯೇ? ಎನಿಸುತ್ತದೆ. ದೇಶದ ಹಿತವನ್ನು ಮತ್ತು ಸಮಗ್ರತೆಯನ್ನು ಕಾಯುವ ಒಂದು ಸದೃಢ ವಿರೋಧ ಪಕ್ಷವಾಗಿ ಕಾಂಗ್ರೆಸ್ ತನ್ನ ಅಸ್ತಿತ್ವವನ್ನು ಕಾಪಿಟ್ಟುಕೊಳ್ಳಲಿ ಎಂದು ನಾವೆಲ್ಲ ಬಯಸುತ್ತೇವೆ. ಈ ಕುರಿತಾಗಿ ಆ ಪಕ್ಷದ ನಾಯಕರು ಚಿಂತನೆ ಮಾಡಬೇಕಿದೆ.

ಹಾಗೆಯೇ, ಇಂದು ದೇಶದ ಪ್ರಜೆ ಎಚ್ಚೆತ್ತುಕೊಂಡಿದ್ದಾನೆ. ರಾಜಕೀಯ ವಿಚಾರದಲ್ಲಿ ಯಾವುದೇ ಪಕ್ಷವಾಗಲಿ ತುಂಬ ವರ್ಷಗಳ ಕಾಲ ವಂಚಿಸುತ್ತ, ಸುಳ್ಳು ಆಶ್ವಾಸನೆಗಳನ್ನು ನೀಡುತ್ತ ಮುಂದುವರಿಯಲಾಗದು. ಇಂಥ ಚಿತ್ತಸ್ಥಿತಿಯನ್ನು ಮತದಾರ ತಾಳ್ಮೆಯಿಂದಲೇ ಬದಲಾಯಿಸಿದ್ದಾನೆ. ಈಗೇನಿದ್ದರೂ ಅವನು, 'ಅಭಿವೃದ್ಧಿಯ ವಿಚಾರವೇನು ಮತ್ತು ದೇಶಕ್ಕಾಗಿ ಮಾಡುವ ಕೆಲಸವೇನು?' ಎಂಬುದನ್ನಷ್ಟೇ ಕೇಳುತ್ತಿದ್ದಾನೆ. ಇಂದಿನ ಯುವಜನರು ಜಾಗೃತ ನಾಗರಿಕರಾಗುತ್ತಿರುವುದು, ದೇಶದಲ್ಲಿ ಮಹತ್ತರ ಬದಲಾವಣೆಯಾಗುತ್ತಿರುವುದರ ಸಂಕೇತವಾಗಿದೆ.

ಚುನಾವಣೆ ಎಂಬುದು ಐದು ವರ್ಷಗಳಿಗೆ ಒಮ್ಮೆ ಮಾತ್ರ ಸಿಗುವ ಅಪರೂಪದ ಅವಕಾಶ. ಪ್ರಜಾಪ್ರಭುತ್ವದ ಈ ಹಬ್ಬದಲ್ಲಿ ನಾವೆಲ್ಲ ಪಾಲ್ಗೊಳ್ಳೋಣ. ನೀವುಗಳೆಲ್ಲ ತಪ್ಪದೇ ಮತದಾನ ಮಾಡುವುದರ ಜತೆಗೆ, ಶೇ.100ರಷ್ಟು ಮತದಾನವಾಗುವ ನಿಟ್ಟಿನಲ್ಲಿ ಇತರರನ್ನೂ ಪ್ರೇರೇಪಿಸಬೇಕು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:127